# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯ ನಿರ್ಣಯ ಮಂಡಲಿ

ಮಲ್ಲೇಶ್ವರಂ, ಬೆಂಗಳೂರು – 560003

# KARNATAKA SCHOOL EXAMINATION AND ASSESSMENT BOARD

Malleshwaram, Bengaluru – 560003

## 2025–26ರ ಎಸ್.ಎಸ್.ಎಲ್.ಸಿ ಮಾದರಿ ಪ್ರಶ್ನೆಪತ್ರಿಕೆ

## S.S.L.C. MODEL QUESTION PAPER : 2025–26

## ವಿಷಯ : ಅರ್ಥಶಾಸ್ತ್ರ

## SUBJECT : ECONOMICS

## (ಕನ್ನಡ ಮಾಧ್ಯಮ / Kannada Medium)

**ಪರೀಕ್ಷಾ ಸಮಯ : 3 ಗಂಟೆ 15 ನಿಮಿಷಗಳು** **ವಿಷಯ ಸಂಕೇತ-96 K**

**ಗರಿಷ್ಠ ಅಂಕಗಳು : 80** **Subject Code : 96 K**

---

## ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು

.

1. ಈ ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 47 ಪ್ರಶ್ನೆಗಳು ಇವೆ
2. ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ ಉತ್ತರಿಸಲು ನಿಗಧಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

**I.** **ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ.** **10x1=10**

1. ಗಿನಿ ಸೂಚ್ಯಂಕವನ್ನು ಬಳಸುವುದು
   ಎ) ಅಸಮಾನತೆಯನ್ನು ಅಳೆಯಲು ಬಿ) ಜೀವನಮಟ್ಟವನ್ನು ಅಳೆಯಲು
   ಸಿ) ನಿರುದ್ಯೋಗವನ್ನು ಅಳೆಯಲು ಡಿ) ಬಡತನವನ್ನು ಅಳೆಯಲು
2. ಭಾರತದಲ್ಲಿ ಮೊಟ್ಟ ಮೊದಲ ಅಣುಶಕ್ತಿ ಕೇಂದ್ರ ಸ್ಥಾಪಿತವಾಗಿರುವುದು.
   ಎ) ನರೋರದಲ್ಲಿ ಬಿ) ಕೈಗಾದಲ್ಲಿ ಸಿ) ತಾರಾಪುರದಲ್ಲಿ ಡಿ) ಕಕ್ರಾಪಾರದಲ್ಲಿ
3. ಇವುಗಳಲ್ಲಿ ಅತಿ ಕಡಿಮೆ ಗುಣಮಟ್ಟದ ಕಲ್ಲಿದ್ದಲು
   ಎ) ಆಂಥ್ರಸೈಟ್ ಬಿ) ಲಿಗ್ನೈಟ್ ಸಿ) ಬಿಟುಮಿನಾಸ್ ಡಿ) ಬ್ರಾನೈಟ್
4. ಸಾಮಾನ್ಯವಾಗಿ ಕಡಿಮೆ ಜನಸಾಂದ್ರತೆಯು ಕಂಡುಬರುವುದು
   ಎ) ಫಲವತ್ತಾದ ಮೈದಾನಗಳಲ್ಲಿ ಬಿ) ನಗರಗಳಲ್ಲಿ ಸಿ) ಕೈಗಾರಿಕಾ ಕೇಂದ್ರಗಳಲ್ಲಿ ಡಿ) ಪರ್ವತ ಪ್ರದೇಶಗಳಲ್ಲಿ
5. ಕಾರ್ನ್‌ವಾಲಿಸ್‌ನು ಜಮೀನ್ದಾರಿ ಪದ್ಧತಿಯನ್ನು ಜಾರಿಗೆ ತಂದದ್ದು
   ಎ) ಮದ್ರಾಸಿನಲ್ಲಿ ಬಿ) ಬಂಗಾಳದಲ್ಲಿ ಸಿ) ಮೈಸೂರಿನಲ್ಲಿ ಡಿ) ಪಂಜಾಬಿನಲ್ಲಿ
6. ಕೃಷಿ ಉತ್ಪಾದನೆಯಲ್ಲಿ ಹೆಚ್ಚಳವನ್ನು ಹೀಗೆ ಕರೆಯಲಾಗುವುದು.
   ಎ) ಹಸಿರು ಕ್ರಾಂತಿ ಬಿ) ಸುವರ್ಣ ಕ್ರಾಂತಿ ಸಿ) ಶ್ವೇತಕ್ರಾಂತಿ ಡಿ) ಹಳದಿ ಕ್ರಾಂತಿ
7. ದೀರ್ಘಾವಧಿ ಸಾಲದ ಅವಧಿ
   ಎ) 10 ರಿಂದ 2 ವರ್ಷಗಳು ಬಿ) 20 ರಿಂದ 25 ವರ್ಷಗಳು
   ಸಿ) 5 ರಿಂದ 20 ವರ್ಷಗಳು ಡಿ) 5 ರಿಂದ 10 ವರ್ಷಗಳು
8. ರಾಷ್ಟ್ರೀಯ ಹೆದ್ದಾರಿಗಳು ಸಂಪರ್ಕಿಸುವುದು
   ಎ) ಪಟ್ಟಣಗಳನ್ನು ಬಿ) ಜಿಲ್ಲೆಗಳನ್ನು
   ಸಿ) ಹಳ್ಳಿಗಳನ್ನು ಡಿ) ವಿವಿಧ ರಾಜ್ಯಗಳ ರಾಜಧಾನಿಗಳನ್ನು ಮತ್ತು ಬಂದರುಗಳನ್ನು
9. ಬಕಿಂಗ್ ಹ್ಯಾಮ್ ಕಾಲುವೆ ಇರುವುದು
   ಎ) ಒರಿಸ್ಸಾದಲ್ಲಿ ಬಿ) ಕೇರಳದಲ್ಲಿ ಸಿ) ತಮಿಳುನಾಡಿನಲ್ಲಿ ಡಿ) ಮಹಾರಾಷ್ಟ್ರದಲ್ಲಿ
10. ಭಾರತೀಯ ರಿಸರ್ವ್ ಬ್ಯಾಂಕಿನ ಕೇಂದ್ರ ಕಛೇರಿ ಇರುವುದು.
    ಎ) ಕೊಲ್ಕತ್ತಾದಲ್ಲಿ ಬಿ) ಮುಂಬೈಯಲ್ಲಿ ಸಿ) ಚೆನ್ನೈಯಲ್ಲಿ ಡಿ) ನವದೆಹಲಿಯಲ್ಲಿ

**II.** **ಎ ಪಟ್ಟಿಯನ್ನು ಬಿ ಪಟ್ಟಿಯೊಂದಿಗೆ ಹೊಂದಿಸಿ, ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ.** **5x1=5**

| ಎ–ಪಟ್ಟಿ | ಬಿ–ಪಟ್ಟಿ |
|---|---|
| 1) ಉತ್ತರ ರೈಲ್ವೆ | i) ಮುಂಬೈ |
| 2) ದಕ್ಷಿಣ ರೈಲ್ವೆ | ii) ಹುಬ್ಬಳ್ಳಿ |
| 3) ಮದ್ಯ ರೈಲ್ವೆ | iii) ಭುವನೇಶ್ವರ್ |
| 4) ಪೂರ್ವಕರಾವಳಿ ರೈಲ್ವೆ | iv) ನವದೆಹಲಿ |
| 5) ನೈಋತ್ಯ ರೈಲ್ವೆ | v) ಚೆನ್ನೈ |
| | vi) ಜೈಪುರ |
| | vii) ಗೌಹಾಟಿ |

**III.** **ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **15x1=15**

12. ವಿಶ್ವ ಸಂಸ್ಥೆಯ ಪ್ರಕಾರ ಅಭಿವೃದ್ಧಿ ಎಂದರೇನು?
13. ಗಣಿಗಾರಿಕೆ ಎಂದರೇನು?
14. ವಿಶ್ವದಲ್ಲಿಯೇ ಉಕ್ಕನ್ನು ಕಡಿಮೆ ವೆಚ್ಚದಲ್ಲಿ ಉತ್ಪಾದಿಸುವ ರಾಷ್ಟ್ರ ಯಾವುದು?
15. ಮಾನವ ಶಕ್ತಿ ಯೋಜನೆ ಎಂದರೇನು?

16. ಸಾಪೇಕ್ಷ ಬಡತನದ ಅರ್ಥವನ್ನು ಬರೆಯಿರಿ.
17. ವಿದೇಶಿ ವಿನಿಮಯವನ್ನು ವ್ಯಾಖ್ಯಾನಿಸಿ.
18. ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಬಂಡವಾಳ ಸಂಚಯನ ಹೆಚ್ಚಾಗಿರುತ್ತದೆ. ಏಕೆ?
19. ಪೆಟ್ರೋಲಿಯಂ ಅನ್ನು ಹೇಗೆ ಶುದ್ಧೀಕರಣ ಮಾಡಲಾಗುತ್ತದೆ?
20. ಫೋಟೋ ವೋಲ್ಟಾಯಿಕ್ ವಿಧಾನವನ್ನು ಏಕೆ ಬಳಸಲಾಗುತ್ತದೆ?
21. ಅಂಕಲೇಶ್ವರ ಏಕೆ ಪ್ರಸಿದ್ಧಿ ಪಡೆದಿದೆ?
22. ಭಾರತದಲ್ಲಿ 1891 ರಿಂದ 1921ರ ಅವಧಿಯನ್ನು ಜಡಸ್ಥಿತಿಯ ಜನಸಂಖ್ಯಾ ಬೆಳವಣಿಗೆ ಎಂದು ಕರೆಯಲಾಗಿದೆ. ಏಕೆ?
23. ಬಡಬೆಳೆ ಪದ್ಧತಿಯ ಪರಿಣಾಮವೇನು?
24. ಸಂಬಂಧಿಕರು ಮತ್ತು ಸ್ನೇಹಿತರು ಕೃಷಿ ಹಣಕಾಸಿನಲ್ಲಿ ಹೇಗೆ ಸಹಕಾರಿಯಾಗಿದ್ದಾರೆ?
25. ಹೂಡಿಕ ಹಿಂತೆಗೆತ ಏಕೆ ಅವಶ್ಯಕವಾಗಿದೆ?
26. ಸ್ವಸಹಾಯ ಗುಂಪುಗಳ ಪ್ರಾಮುಖ್ಯತೆ ಏನು?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. 14x2=28**

27. ಮಾನವ ಅಭಿವೃದ್ಧಿ ಸೂಚ್ಯಂಕವನ್ನು ಹೆಸರಿಸಿ.
28. 1991ರ ಹೊಸ ಕೈಗಾರಿಕಾ ನೀತಿಯಲ್ಲಿ ಸೇರಿಸಲಾದ ಅಂಶಗಳು ಯಾವುವು?
29. ಭಾರತೀಯ ರಿಸರ್ವ್ ಬ್ಯಾಂಕಿನ ಪ್ರಾದೇಶಿಕ ಕಛೇರಿಗಳನ್ನು ತಿಳಿಸಿ.
30. ಅಸಂಘಟಿತ ವಲಯದ ಕಾರ್ಮಿಕರ ಸಮಸ್ಯೆಗಳು ಯಾವುವು?
31. ಮಾನವ ಶಕ್ತಿ ಯೋಜನೆಯು ಏಕೆ ಪ್ರಮುಖವಾಗಿದೆ?
32. ರೈತವಾರಿ ಪದ್ಧತಿಯನ್ನು ವಿವರಿಸಿ.
33. ಕಚ್ಚಾ ವಸ್ತುಗಳ ಬಳಕೆಯ ಆಧಾರದ ಮೇಲೆ ಕೈಗಾರಿಕೆಗಳನ್ನು ವರ್ಗೀಕರಿಸಿ.
34. ಭಾರತದಲ್ಲಿ ಕಾರ್ಮಿಕ ನೀತಿಯ ಉದ್ದೇಶಗಳನ್ನು ಹೆಸರಿಸಿ.
35. ಭಾರತೀಯ ರಿಸರ್ವ್ ಬ್ಯಾಂಕನ್ನು ಹಣಕಾಸು ವ್ಯವಸ್ಥೆಯ ಮೇಲ್ವಿಚಾರಕನಾಗಿ ವಿವರಿಸಿ?
36. ವ್ಯಾಪಾರವನ್ನು ವರ್ಗೀಕರಿಸಿ.
37. ರೈತರು ಲೇವಾದೇವಿಗಾರರಿಂದ ಹೇಗೆ ಶೋಷಿಸಲ್ಪಡುತ್ತಾರೆ?
38. ಭಾರತದಲ್ಲಿ ಕೃಷಿ ಕಾರ್ಮಿಕರ ಸ್ಥಿತಿಯು ಚಿಂತಾಜನಕವಾಗಿದೆ. ಏಕೆ?
39. ಭಾರತದಲ್ಲಿ 20 ಅಂಶಗಳ ಕಾರ್ಯಕ್ರಮವನ್ನು ಏಕೆ, ಜಾರಿಗೆ ತರಲಾಗಿದೆ?
40. ಆರ್.ಬಿ.ಐ.ನ ತರಬೇತಿ ಸಂಸ್ಥೆಗಳನ್ನು ಹೆಸರಿಸಿ.

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. 6x3=18**

41. ಭಾರತದಲ್ಲಿ ಜನಸಾಂದ್ರತೆಯನ್ನು ಪ್ರಭಾವಿಸುವ ಅಂಶಗಳು ಯಾವುವು?
42. ತುಂತುರು ನೀರಾವರಿಯ ಅನುಕೂಲಗಳನ್ನು ತಿಳಿಸಿ.
43. ಭಾರತದಲ್ಲಿ ಬಡತನಕ್ಕೆ ಕಾರಣಗಳನ್ನು ಬರೆಯಿರಿ.
44. ಭಾರತದಲ್ಲಿ ಕೃಷಿ ಹಣಕಾಸಿನ ಅಗತ್ಯತೆ ಏನು?
45. ದೇಶದ ಆರ್ಥಿಕಾಭಿವೃದ್ಧಿಯಲ್ಲಿ ಕೈಗಾರಿಕಾಭಿವೃದ್ಧಿಯು ಪ್ರಮುಖ ಪಾತ್ರ ವಹಿಸುತ್ತದೆ, ಸಮರ್ಥಿಸಿ.
46. ಭಾರತದಲ್ಲಿ ಕೈಗಾರಿಕಾ ಕಾರ್ಮಿಕರ ಲಕ್ಷಣಗಳು ಯಾವುವು?

**VI. ಈ ಪ್ರಶ್ನೆಗೆ ನಾಲ್ಕರಿಂದ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ. 1x4=4**

47. ವಿದೇಶಿ ವ್ಯಾಪಾರದ ಮಹತ್ವವೇನು?

***********